# ಶಿಕ್ಷಕರಿಗಾಗಿ ಸೂಚನೆಗಳು

## ಎಂಟನೆಯ ತರಗತಿ – ಪ್ರಥಮಭಾಷೆ ಕನ್ನಡ

ಸೇತುಬಂಧ ಕಾರ್ಯಕ್ರಮ ಶಿಕ್ಷಕರಿಗೆ ಚಿರಪರಿಚಿತವಾಗಿದ್ದರೂ ಈ ಸಾಲಿನ 30 ದಿನಗಳ ಸೇತುಬಂಧ ನಾವೀನ್ಯ ಹಾಗೂ ಸವಾಲಿನಿಂದ ಕೂಡಿದೆ. ಕರೋನಾ ಮಹಾಮಾರಿಯಿಂದ ಒಂದು ಶೈಕ್ಷಣಿಕ ವರ್ಷ ವಿದ್ಯಾರ್ಥಿಗಳಿಗೆ ತಮ್ಮ ಸಾಮರ್ಥ್ಯ ಗಳಿಸಿಕೊಳ್ಳಲು ಅಸಾಧ್ಯವಾಗಿದೆ. ಹಿಂದಿನ ಎರಡು ತರಗತಿಗಳ ಸಾಮರ್ಥ್ಯಗಳನ್ನು ಆಧಾರವಾಗಿಟ್ಟುಕೊಂಡು ಪ್ರಸ್ತುತ ತರಗತಿಗೆ ಸಮರ್ಥ ವಿದ್ಯಾರ್ಥಿಗಳನ್ನು ತರುವುದೇ ಈ ಕಾರ್ಯಕ್ರಮದ ಗುರಿಯಾಗಿದೆ. ಇದು ಶಿಕ್ಷಕರಿಗೆ ಒಂದು ರೀತಿಯ ಸವಾಲು ಹಾಗೂ ತಮ್ಮಲ್ಲಿರುವ ವಿಶೇಷ ಬುದ್ಧಿಶಕ್ತಿಯನ್ನು ಬಳಸಿಕೊಳ್ಳುವ ವೇದಿಕೆಯಂತಾಗಿದೆ. ''ಬಂಧ'ದಲ್ಲಿ ಕಳೆದೆರಡು ತರಗತಿಗಳ ಸಾಮರ್ಥ್ಯವನ್ನು ಗಳಿಸಿಕೊಂಡು ಹೊಸ ಸಾಮರ್ಥ್ಯ ಗಳಿಸಿಕೊಳ್ಳುವತ್ತ ದಿಟ್ಟ ಹೆಜ್ಜೆಯಿಡುವಂತಾಗುತ್ತಾರೆ. ಈ ನಿಟ್ಟಿನಲ್ಲಿಯೇ ಈ ಕಾರ್ಯಕ್ರಮವು ರೂಪಿತವಾಗಿದೆ.

- ಸೇತುಬಂಧ ಸಾಹಿತ್ಯದಲ್ಲಿ ನೀಡಿರುವ ಚಟುವಟಿಕೆಗಳ ಪಟ್ಟಿ ಒಂದು ಮಾದರಿ ಅಷ್ಟೇ. ಸದರಿ ಕಲಿಕಾ ಫಲವನ್ನು ಮಕ್ಕಳಲ್ಲಿ ಬೆಳೆಸಲು ಶಿಕ್ಷಕರು ಪೂರಕ / ಸ್ಥಳೀಯ ಅಗತ್ಯ ಚಟುವಟಿಕೆಗಗಳನ್ನು ರೂಪಿಸಿಕೊಳ್ಳಲು ಶಿಕ್ಷಕರು ಸ್ವತಂತ್ರರಾಗಿರುತ್ತಾರೆ.
- ಪ್ರತಿ ದಿನದ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಕೆಲವೊಂದು ಸಿದ್ಧತೆಗಳು, ಸಂಪನ್ಮೂಲಗಳು ಹಾಗೂ ಪಾಠೋಪಕರಣಗಳ ಸಿದ್ಧತೆ ಅಗತ್ಯವಿದ್ದು, ಶಿಕ್ಷಕರು ಈ ಕುರಿತು ಅಗತ್ಯ ಕ್ರಮವಹಿಸಿಬೇಕಾಗಿರುತ್ತದೆ.
- ಶಿಕ್ಷಕರಿಗೆ ಸಲಹಾತ್ಮಕ ಚಟುವಟಿಕೆಗಳನ್ನು ನೀಡಿದ್ದು, ಅದರಲ್ಲಿ ಕೆಲವಕ್ಕೆ ವಿವರಣೆ ನೀಡಲಾಗಿದೆ. ಅದನ್ನು ಅನುಸರಿಸಿ ಉಳಿದ ಚಟುವಟಿಕೆಗಳನ್ನು ಕೈಗೊಳ್ಳುವುದು.

ಎಂಟನೆಯ ತರಗತಿ ಪ್ರಥಮ ಭಾಷೆ ಕನ್ನಡ

'ಬಂಧ' ಸಾಹಿತ್ಯ

| ದಿನ | ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಯ ನಿರ್ವಹಣೆಗೆ ಸೂಚನೆಗಳು |
|---|---|---|---|---|
| **1.** | **ಕ್ಷೇತ್ರ – ಆಲಿಸುವುದು**<br><br>1.ಪರಿಚಿತ/ ಅಪರಿಚಿತ ಸನ್ನಿವೇಶ, ಘಟನೆ ನಡೆದ ಸಂದರ್ಭದ ಸಂಭಾಷಣೆ ಹಾಗೂ ಚರ್ಚೆಯನ್ನು ಆಲಿಸಿ ಸೂಕ್ತ ಪ್ರತಿಕ್ರಿಯೆ ನೀಡುವರು. | *ಪರಿಚಿತ/ಅಪರಿಚಿತ ವಿಷಯವನ್ನು ಆಲಿಸಿ ಗ್ರಹಿಸಿ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾರೆ. | 1.1 **'ಥಟ್ ಅಂತ ಹೇಳಿ**<br><br>1.2 – ಕಲ್ಪಿತ ಕಲೆ.<br><br>1.3 –ಸನ್ನಿವೇಶ ಕೇಳು, ವಿವರಣೆ ಹೇಳು. | 1.1-ಶಿಕ್ಷಕರು ಮಕ್ಕಳಿಗೆ ಪರಿಚಿತ/ ಅಪರಿಚಿತವಿರುವ ವ್ಯಕ್ತಿಗಳ/ ಪ್ರಾಣಿಗಳ/ ಶಬ್ದಗಳ ಧ್ವನಿಯನ್ನು ಕೇಳಿಸಿ, ಇದು ಯಾರ? ಅಥವಾ ಯಾವುದರ? ಧ್ವನಿ ಎಂಬುದನ್ನು ಯೋಚಿಸಿ ಹೇಳಿಸಿ ಹಾಗೂ ಅನುಕರಿಸಲು ಅವಕಾಶ ನೀಡಿ. **ಉದಾ :** ಚಿತ್ರನಟರ / ಪ್ರಸಿದ್ಧ ವ್ಯಕ್ತಿಗಳ ಮಾತುಗಳು, ಪ್ರಾಣಿಗಳ ಕೂಗುಗಳು, ಪರಿಸರದಲ್ಲಿ ಉಂಟಾಗುವ ಘಟನೆಗಳು (ಗಾಳಿ ಬೀಸುವ, ಕಾಯಿ ಬೀಳುವ, ನದಿ ಹರಿಯುವ ಶಬ್ದಗಳು)<br>1.2 – ಶಿಕ್ಷಕರು ತಾವು ಹೇಳಿದಂತೆ ಮಕ್ಕಳು ಹಂತ ಹಂತವಾಗಿ ಚಿತ್ರವನ್ನು ಬರೆಯುತ್ತಾ ಚಿತ್ರ ಪೂರ್ಣಗೊಳಿಸುವಂತೆ ಮಾರ್ಗದರ್ಶಿಸಿ.<br>1.3 – ಅಪರಿಚಿತ ಸನ್ನಿವೇಶಗಳನ್ನು ನೀಡಿ, ಅದರ ಬಗ್ಗೆ ಸ್ವಂತ ಅಭಿಪ್ರಾಯ ಹೇಳಿಸಿ. ಉದಾ : ರೈಲು ನಿಲ್ದಾಣ, ವಿಮಾನ ನಿಲ್ದಾಣ |
| **2.** | | * ಘಟನೆಗಳನ್ನು ಆಲಿಸಿ ಅರ್ಥ ಮಾಡಿಕೊಳ್ಳುತ್ತಾರೆ.<br><br>* ಅಪರಿಚಿತ ಸನ್ನಿವೇಶ, ಘಟನೆ ಎದುರಾದಾಗ ಅದನ್ನು ನಿಭಾಯಿಸುವ ರೀತಿ ಅರಿಯುತ್ತಾರೆ. | 2.1 - **'ಆನ್ ಲೈನ್ ತರಗತಿಗಳ ಅಣುಕು ಪ್ರದರ್ಶನ'**<br><br>2.2 – ಕ್ಷಣ ಕ್ಷಣ | 2.1 - ಶಿಕ್ಷಕರು ಬೆಂಕಿ ಪೊಟ್ಟಣಗಳೆರಡಕ್ಕೆ ಮಧ್ಯದಲ್ಲಿ ಉದ್ದನೆಯ ದಾರವನ್ನು ಕಟ್ಟಿ ಮಕ್ಕಳಿಂದ ಫೋನ್ ತಯಾರಿ ಮಾಡಿಸಿ, ನಂತರ ಹಲವು ವಿದ್ಯಾರ್ಥಿಗಳು ಹಾಗೂ ಒಬ್ಬರು ಶಿಕ್ಷಕರೆಂದು ಭಾವಿಸಿ ಪಾಠ ಬೋಧನಾ ರೀತಿಯ ಸಂಭಾಷಣೆ ನಡೆಸಲು ತಿಳಿಸಿ.<br>2.2 – ಶಾಲಾವರಣದಲ್ಲಿ ಆಕಸ್ಮಿಕ ಘಟನೆಗಳು ನಡೆದಾಗ ನಿಭಾಯಿಸುವ |

| | | | | |
|---|---|---|---|---|
| | | | 2.3 - 'ಮಾತಿಗೆ ಮಾತು' | ರೀತಿಯನ್ನು ಸಂವಾದ ನಡೆಸಿ. ಉದಾ: ನೀರಿನ ಪೈಪ್ ಒಡೆದಾಗ, ಅಗ್ನಿ ಅವಘಡ, ವೈದ್ಯರ ತಪಾಸಣಾ ಭೇಟಿ.<br>2.3 - ಒಂದು ವರ್ಷ ತರಗತಿಗಳು ನಡೆಯದೇ ಇದ್ದ ಕಾರಣ ಮಕ್ಕಳು ರಜಾ ಅವಧಿಯಲ್ಲಿ ತಾವು ಕಲಿತ ಕೌಶಲಗಳನ್ನು ಪಟ್ಟಿ ಮಾಡಿ, ಹೇಳಿಸಿ. |
| **3.** | 2.ಗುಂಪು ಚಟುವಟಿಕೆಗಳ ನಿರ್ದೇಶನಗಳನ್ನು ಆಲಿಸಿ ಅರ್ಥಮಾಡಿಕೊಂಡು ಆಂಗಿಕವಾಗಿ ಪ್ರತಿಕ್ರಿಯಿಸುವರು. | * ಚಟುವಟಿಕೆಗಳನ್ನು ನಿರ್ವಹಿಸುವ ಮೊದಲು ನಿರ್ದೇಶನಗಳನ್ನು ಸರಿಯಾಗಿ ಆಲಿಸಿ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುತ್ತಾರೆ. | **3.1-ನಡೆ ನಿಲ್ಲು ನುಡಿ**<br>3.2 –ಕ್ರೀಡಾ ನಿಯಮ.<br>3.3-ಕಥನ ಗೀತೆ ಕೇಳು, ಕಥೆ ಹೇಳು. | 3.1 - ಶಿಕ್ಷಕರು ನಡೆ-ನಿಲ್ಲು-ನುಡಿ ಎಂದು ಹೇಳಿದ ತಕ್ಷಣ ವಿದ್ಯಾರ್ಥಿಗಳು ಅದರಂತೆ ಮಾಡಬೇಕು. ನಿಂತಾಗ ಶಿಕ್ಷಕರು ನುಡಿ ಎನ್ನಿ, ಆಗ ತಮ್ಮ ಎದುರಿಗೆ ನಿಂತಿರುವವರೊಂದಿಗೆ ಒಂದು ಪದವನ್ನು ಹಂಚಿಕೊಳ್ಳಲು ತಿಳಿಸಿ, ಚಟುವಟಿಕೆ ನಂತರ ಎಲ್ಲಾ ಪದಗಳನ್ನು ಪಟ್ಟಿಮಾಡಿಸಿ ಹಾಗೂ ಪದಗಳಿಗೆ ವಾಕ್ಯ ರಚಿಸಲು ತಿಳಿಸಿ.<br>3.2 – ವಿವಿಧ ಹೊರಾಂಗಣ ಕ್ರೀಡೆಗಳ ನಿಯಮಗಳನ್ನು ಹೇಳಿಸಿ ಅದರಂತೆ ಕ್ರೀಡಾಂಗಣವನ್ನು ಆಟಗಾರರಿಂದ ಸಜ್ಜುಗೊಳಿಸಲು ತಿಳಿಸಿ. |
| **4.** | | * ನಿರ್ದೇಶನಗಳಿಗೆ ತಕ್ಕಂತೆ ಗುಂಪು ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ. | **4.1 - 'ಉಸಿರು ಜೋಪಾನ' (ನುಡಿಗಟ್ಟುಗಳ ಅರ್ಥ ಹೇಳಿಸುವುದು)**<br>4.2 – ಸಂಚಾರಿ ನಿಯಮಗಳ ಪ್ರದರ್ಶನ.<br>4.3 – ಸೈನ್ಯ ಸಜ್ಜು | 4.1 - ಶಿಕ್ಷಕರು ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿ ಪ್ರತೀ ಗುಂಪಿಗೂ ಬಲೂನ್ ಗಳನ್ನು ನೀಡುವುದು. ನಂತರ ಶಿಕ್ಷಕರು ನುಡಿಗಟ್ಟುಗಳನ್ನು ಹೇಳಿದಾಗ ಮಕ್ಕಳು ಬಲೂನನ್ನು ಊದಿ ಅದರ ಮೇಲೆ ಮಾರ್ಕರ್ ನಿಂದ ನುಡಿಗಟ್ಟನ್ನು ಬರೆದು, ಗಟ್ಟಿಯಾಗಿ ಕೂಗಿ ಹೇಳುವಂತೆ ತಿಳಿಸುವುದು.<br>4.3 – ಚದುರಂಗದ ಆಟದ ಅಂಗಣದಲ್ಲಿ ಕಾಯಿಗಳನ್ನು ನಡೆಸುವ ಪರಿಯನ್ನು ಆಧರಿಸಿ ಆಟ ಆಡಿಸಿ. |

| | | | | |
|---|---|---|---|---|
| **5.** | | * ನಿರ್ದೇಶನಗಳಿಗೆ ತಕ್ಕಂತೆ ಆಂಗಿಕವಾಗಿ ಪ್ರತಿಕ್ರಿಯಿಸುತ್ತಾರೆ. | **5.1 - 'ನುಡಿದಂತೆ ನಡೆ'**<br><br>5.2 – ಸಿನಿಮಾ ಆರಿಸಿ, ಡೈಲಾಗ್ ಹೇಳು.<br><br>5.3 - ಪಾತ್ರಾಭಿನಯ. | 5.1 - ಶಿಕ್ಷಕರು ಒಂದು ಅಡ್ಡ ಪರದೆಯನ್ನಿಟ್ಟು ಪರದೆ ಹಿಂದೆ ಒಬ್ಬ ವಿದ್ಯಾರ್ಥಿಯು ತಮಗಿಷ್ಟ ಬಂದ ಚಿತ್ರನಟರ ಡೈಲಾಗ್ ಗಳನ್ನು ಹೇಳುತ್ತಿದ್ದರೆ ಪರದೆ ಮುಂದೆ ಮತ್ತೊಬ್ಬ ವಿದ್ಯಾರ್ಥಿ ಅದಕ್ಕೆ ತಕ್ಕ ಹಾಗೇ ಅಭಿನಯಿಸಲು ಅವಕಾಶ ಕಲ್ಪಿಸಿ.<br>5.3 – ಕುಂಟ, ಕುರುಡ, ಮೂಕ, ಡ್ರೈವರ್, ವೈದ್ಯ ಇತ್ಯಾದಿ. |
| **6.** | **ಕ್ಷೇತ್ರ : ಮಾತನಾಡುವುದು**<br>3. ಸನ್ನಿವೇಶ ಮತ್ತು ಘಟನೆಗಳನ್ನು ಕುರಿತು ನಿರರ್ಗಳ ಹಾಗೂ ಸ್ಪಷ್ಟವಾಗಿ ಮಾತನಾಡುವರು. | * ಸನ್ನಿವೇಶ ಮತ್ತು ಘಟನೆಗಳಿಗೆ ಸಂಬಂಧ ಕಲ್ಪಿಸಿ ಮಾತನಾಡುತ್ತಾರೆ. | 6.1 - **'ಆ ಮಾತು–ಈ ಮಾತು'** ಕಂಡಕ್ಟರ್-ಪ್ರಯಾಣಿಕ (ಚಿಲ್ಲರೆಗಾಗಿ) ಬಸ್ ಚಾಲಕ-ಬೈಕ್ ಸವಾರ (ಬಸ್ ಗೆ ಅಡ್ಡಬಂದಾಗ)<br>6.2 – ಸಂಭಾಷಣೆಗಳು.<br><br>6.3 – ಸಂಬಂಧಾರೋಪಣೆ. | * ಶಿಕ್ಷಕರು ಎರಡು ಪಾತ್ರಗಳನ್ನು ನೀಡಿ ಸಾಮಾನ್ಯವಾಗಿ ಮಾತನಾಡುವ ರೀತಿ ಹಾಗೂ ಉತ್ತಮವಾಗಿ ಮಾತನಾಡುವ ರೀತಿಯನ್ನು ಅಭಿನಯಿಸಲು ತಿಳಿಸಿ.<br><br>6.2 - ಇಬ್ಬರು ವ್ಯಕ್ತಿಗಳ ನಡುವಿನ ಋಣಾತ್ಮಕ ಹಾಗೂ ಧನಾತ್ಮಕ ಮಾತುಕತೆ. ಉದಾ : ವೈದ್ಯ-ರೋಗಿ,<br><br>6.3 – ಕುಟುಂಬಗಳ ಕಲಹಗಳು ಉಂಟಾಗಲು ಕಾರಣಗಳನ್ನು ಊಹಿಸಿ ಹೇಳಲು ತಿಳಿಸಿ. |
| **7.** | | * ಮಾತಿನಲ್ಲಿ ನಿರರ್ಗಳತೆ ಹಾಗೂ ಸ್ಪಷ್ಟತೆಯನ್ನು ಹೆಚ್ಚಿಸಿಕೊಳ್ಳುತ್ತಾರೆ. | 7.1 - **'ಧ್ವನಿ-ಪ್ರತಿಧ್ವನಿ'**<br><br>7.2 – ಹರಟೆ<br>7.3 – ಕವನ ವಾಚನ<br>7.4 – ಕವಿ ಪರಿಚಯ | 7.1 - ಶಿಕ್ಷಕರು ಮಕ್ಕಳಿಂದ ತಾವು ಮಾಧ್ಯಮಗಳಲ್ಲಿ ಕೇಳಿದ ಸಾಮಾಜಿಕ ಕಳಕಳಿ ಕುರಿತ ಜಾಹೀರಾತಿನ ಮಾತುಗಳನ್ನು ಅದರಂತೆ ನಿರೂಪಿಸಲು ಹೇಳಿ. **ಉದಾ:** ಕೊರೊನಾ ಜಾಗೃತಿ ಜಾಹೀರಾತು, ಅಥವಾ ತಾವೇ ಸ್ವತಃ ಸಾಮಾಜಿಕ ಜಾಗೃತಿ ಕುರಿತ ಘೋಷವಾಕ್ಯಗಳನ್ನು ಬರೆದು ಹೇಳಲು ತಿಳಿಸಿ. |
| **8.** | | * ವಿಷಯಕ್ಕೆ ಸಂಬಂಧಿಸಿದಂತೆ ತಾರ್ಕಿಕವಾಗಿ ಮಾತನಾಡುತ್ತಾರೆ. | **8.1 - 'ಬದುಕುಳಿವವರು ಯಾರು?'** | 8.1 - ಶಿಕ್ಷಕರು ಹನ್ನೆರಡು ವೃತ್ತಿ/ಸೇವೆ ಹೆಸರನ್ನು ಚೀಟಿಗಳಲ್ಲಿ ಬರೆದು |

| | | | | |
|---|---|---|---|---|
| | | | 8.2 – ಕೆಲಸಕ್ಕೆ ಸಂದರ್ಶನ.<br><br>8.3 – ಪುಸ್ತಕ ಪರಿಚಯ. | ಡಬ್ಬದಲ್ಲಿಟ್ಟು ಮಕ್ಕಳು ಆರಿಸಲು ಹೇಳಿ, ನಂತರ **'ಜೀವನದ ದೋಣಿ'**ಯಲ್ಲಿ ಹನ್ನೊಂದು ಜನ ಮಾತ್ರ ಪಯಣಿಸಲು ಸಾಧ್ಯ, ಹಾಗಾದರೆ ನಾನೇಕೆ ಬದುಕಬೇಕು? ನನ್ನಿಂದ ಸಮಾಜಕ್ಕೆ ಆಗುವ ಪ್ರಯೋಜನಗಳೇನು? ಎಂಬುದನ್ನು ವಿವರಿಸಬೇಕು. ನಂತರ ಕೊನೆಗೆ ಎಲ್ಲರೂ ಸೇರಿ, ಯಾರು? ದೋಣಿಯಿಂದ ಹಾರಬೇಕು ಎಂಬುದನ್ನು ಸೂಕ್ತ ಕಾರಣಗಳನ್ನು ನೀಡಿ ತೀರ್ಮಾನಿಸಲು ತಿಳಿಸಿ.<br>8.3 – ಶಿಕ್ಷಕರು, ವಿದ್ಯಾರ್ಥಿಯು ತನಗಿಷ್ಟವಾದ ಯಾವುದಾದರೂ ಒಂದು ಪುಸ್ತಕವನ್ನು ಅದರ ಮಹತ್ವ/ ವಿಶೇಷತೆಯೊಂದಿಗೆ ಪರಿಚಯಿಸಲು ಅನುಕೂಲಿಸಿ. |
| **9.** | 4. ನಾಣ್ಣುಡಿ, ನುಡಿಗಟ್ಟು ಮತ್ತು ಗಾದೆಗಳನ್ನು ಮಾತುಗಳಲ್ಲಿ ಬಳಸುವರು. | * ನಾಣ್ಣುಡಿ, ನುಡಿಗಟ್ಟು, ಗಾದೆಗಳನ್ನು ಗುರುತಿಸುತ್ತಾರೆ. | **9.1 - 'ಮೂಕ ಜಾಣ'**<br><br>9.2 – ನಾನರ್ಥ, ನೀನರ್ಥ<br><br>9.3 - ವಿಗಂಡಿಸು<br><br>9.4 – ಸ್ವ ನಾಣ್ಣುಡಿ ಬರಹ. | 9.1 - ಶಿಕ್ಷಕರು ಸರಳ ಗಾದೆ ಮಾತುಗಳನ್ನು ಚೀಟಿಗಳಲ್ಲಿ ಬರೆದು, ಕೈಚೀಲದಲ್ಲಿಟ್ಟು ಮಕ್ಕಳನ್ನು 2-3 ಮಕ್ಕಳಿರುವಂತೆ ಗುಂಪು ರಚಿಸಿ ಒಬ್ಬರು ಚೀಟಿಯನ್ನು ಆರಿಸಿ ಗಾದೆಯನ್ನು ಅಂಗಿಕವಾಗಿ ತೋರ್ಪಡಿಸಿ, ಗುಂಪಿನ ಇತರ ಮಕ್ಕಳು ಗಾದೆಯನ್ನು ಗ್ರಹಿಸಿ ಹೇಳಲು ಅವಕಾಶ ಕಲ್ಪಿಸಿ.<br>9.2 – ಮಕ್ಕಳನ್ನು ಗುಂಪುಗಳಾಗಿ ವಿಗಂಡಿಸಿ, ಒಂದು ಗುಂಪು ಗಾದೆಯ ಮೊದಲ ಭಾಗವನ್ನು, ಮತ್ತೊಂದು ಗುಂಪು ಮುಂದಿನ ಭಾಗವನ್ನು ಹೇಳುವಂತೆ ತಿಳಿಸಿ.<br>9.3 – ನಾಣ್ಣುಡಿ, ನುಡಿಗಟ್ಟು, ಗಾದೆಮಾತುಗಳನ್ನು ಬರೆದ ಚೀಟಿಗಳನ್ನು ಆರಿಸಿ, ವಿಗಂಡಿಸಲು ತಿಳಿಸಿ. |

| | | | | |
|---|---|---|---|---|
| **10.** | | * ನುಡಿಗಟ್ಟು, ಗಾದೆಗಳ ಒಳಾರ್ಥವನ್ನು ಅರಿತು ಹೇಳುತ್ತಾರೆ. | **10.1 - 'ಕೈ ಜೋಡಿಸು**<br><br>10.2 – ಗಾದೆ ವಿಸ್ತರಿಸು.<br><br>10.3 – ವಾಕ್ಯ ಬಂಧ.<br>10.4 – ಗಾದೆಗೊಂದು ಕತೆ. | 10.1 - ಶಿಕ್ಷಕರು ಗಾದೆಗಳು, ನುಡಿಗಟ್ಟುಗಳನ್ನು ಹಾಗೂ ಅವುಗಳ ಒಳಾರ್ಥವನ್ನು ಪ್ರತ್ಯೇಕ ಕಾರ್ಡ್ ಗಳಲ್ಲಿ ಬರೆದು, ಅವುಗಳನ್ನು ತರಗತಿಯ ಎಲ್ಲಾ ಮಕ್ಕಳಿಗೆ ಹಂಚಿ, ಒಂದಕ್ಕೊಂದು ಸೂಕ್ತವಾದ ಗಾದೆ, ನುಡಿಗಟ್ಟುಗಳನ್ನು ಅರ್ಥಗಳೊಂದಿಗೆ ಜೋಡಿಸಿ ಓದಿಸಿ.<br>10.3 – ನುಡಿಗಟ್ಟುಗಳಿಗೆ ವಾಕ್ಯ ರಚಿಸಲು ಪ್ರೋತ್ಸಾಹಿಸಿ. |
| **11.** | | * ದೈನಂದಿನ ಜೀವನದಲ್ಲಿ ಸನ್ನಿವೇಶಗಳಿಗೆ ಹೊಂದಾಣಿಕೆ ಆಗುವ ಗಾದೆಗಳನ್ನು ಗುರುತಿಸುತ್ತಾರೆ. | **11.1 - 'ಸ್ವಾವಲೋಕನ**<br>11.2 – ಆಧುನಿಕ ಗಾದೆಗಳ ರಚನೆ.<br>11.3 – ಸನ್ನಿವೇಶಕ್ಕೊಂದು ಗಾದೆ. | 11.1 - ಶಿಕ್ಷಕರು ಪಟ್ಟಿಮಾಡಿಸಿರುವ ಗಾದೆ ಮಾತುಗಳು ಅಥವಾ ನುಡಿಗಟ್ಟುಗಳಲ್ಲಿ ಒಂದನ್ನು ಮಗುವು ಆರಿಸಿಕೊಂಡು ಆ ಗಾದೆಗೆ ಹೊಂದುವ ತನ್ನ ಜೀವನದ ಘಟನೆಯೊಂದನ್ನು ಹೇಳಿಸಿ. |
| **12.** | **ಕ್ಷೇತ್ರ : ಓದುವುದು**<br>5. ವಿವಿಧ ಪದಗಳ ಧ್ವನಿ ಸಾಮ್ಯತೆ ಹಾಗೂ ಧ್ವನಿ ವ್ಯತ್ಯಾಸಗಳನ್ನು ಅರ್ಥಮಾಡಿಕೊಂಡು ಓದುವರು. | * ಸ್ವರಗಳು, ಅಲ್ಪಪ್ರಾಣ, ಮಹಾಪ್ರಾಣ, ಅನುನಾಸಿಕ ಹಾಗೂ ಒತ್ತಕ್ಷರಗಳ ಉಚ್ಚಾರಣೆಯನ್ನು ಗಮನಿಸಿ ಓದುತ್ತಾರೆ. | **12.1 - 'ನುಡಿಬಿಂಬ'**<br><br>12.2 - ವಾಕ್ಯಗುಚ್ಛ<br><br>12.3 – ಅರ್ಥ ಅಪಾರ್ಥ | 12.1 - ಶಿಕ್ಷಕರು ಮಿಂಚುಪಟ್ಟಿಗಳಲ್ಲಿ ಸರಳ ಪದಗಳು, ವಾಕ್ಯಗಳನ್ನು ಬರೆದುಕೊಂಡು ಅದನ್ನು ಕನ್ನಡಿಗೆ ಹಿಡಿದು ಕನ್ನಡಿಯಲ್ಲಿ ಕಾಣುವ ಬಿಂಬವನ್ನು ನೋಡಿ ಓದುವಂತೆ ಮಕ್ಕಳಿಗೆ ಪ್ರೇರೇಪಿಸಿ.<br>12.2 – ಆಯ್ದ ವಾಕ್ಯ ವೃಂದವನ್ನು ನೀಡಿ, ಅನುಸ್ವಾರ ವಿಸರ್ಗಗಳಿಂದ ಕೂಡಿದ ಪದಗಳನ್ನು ಪಟ್ಟಿ ಮಾಡಿಸಿ, ಓದಿಸಿ.<br>12.3 –ವ್ಯಂಜನಾಕ್ಷರಗಳ ಸರಿಯಾದ ಬಳಕೆಯನ್ನು ಅರಿಯಲು ಅನುಕೂಲಿಸಿ. ಉದಾ: ದನ-ಧನ, ಶುಭಾಶಯ-ಶುಭಾಷಯ, ಶಿಕ್ಷಕ-ಸಿಕ್ಷಕ, ಹಣ-ಅಣ ಇತ್ಯಾದಿ. |

| | | | | |
|---|---|---|---|---|
| **13.** | | * ಪದ ಸಂಪತ್ತನ್ನು ಹೆಚ್ಚಿಸಿಕೊಳ್ಳುವುದರೊಂದಿಗೆ ಪದಗಳ ಉಚ್ಛಾರಣೆಯನ್ನು ಸ್ಪಷ್ಟವಾಗಿ ಓದುತ್ತಾರೆ. | **13.1 - "ಹುಡುಕಿ – ಗೆಲ್ಲು" (ವೈಯಕ್ತಿಕ / ಗುಂಪು ಆಟ)**<br>13.2 – ಪದಗಳಿಗೆ ಸ್ವಂತವಾಕ್ಯ ರಚನೆ.<br>13.3–ಕತೆಗಳ ವಾಚನ.<br>13.– ನಿಯತಕಾಲಿಕೆಗಳ ಸಂಗ್ರಹ ವಾಚನ. | 13.1 - ಶಿಕ್ಷಕರು ಶಬ್ದಕೋಶದಲ್ಲಿ ಸರಳತೆಯಿಂದ ಕ್ಲಿಷ್ಟತೆ ಆಧರಿಸಿ ಪದಗಳನ್ನು ಹೇಳಿ, ಮಕ್ಕಳು ಆ ಪದಗಳನ್ನು ಶಬ್ದಕೋಶದಲ್ಲಿ ಹುಡುಕಿ ಅದರ ಅರ್ಥಸಹಿತ ಸ್ಪಷ್ಟವಾಗಿ ಓದಲು ತಿಳಿಸಿ. |
| **14.** | | * ಧ್ವನಿ ಸಾಮ್ಯತೆ, ಧ್ವನಿ ವ್ಯತ್ಯಾಸಗಳನ್ನು ಅರಿತು ಸ್ಪಷ್ಟವಾಗಿ ಓದುತ್ತಾರೆ. | **14.1 - 'ಸವಾಲು-ಜವಾಬು'**<br>14.2 - 'ನಾಲಿಗೆ ಸುರುಳಿ '<br>14.3 - ತತ್ಸಮ-ತದ್ಭವ ಪದಗಳ ಬರಹ.<br>14.4 – ಆಡು ಭಾಷೆ-ಗ್ರಾಂಥಿಕ ಭಾಷೆ ಪದಗಳ ಪ್ರಯೋಗ. | 14.1 - ಶಿಕ್ಷಕರು ಎರಡು ಪಾತ್ರಗಳ ನಡುವೆ ಸಂಭಾಷಣೆ ಅಥವಾ ಉತ್ತರ-ಪ್ರತ್ಯುತ್ತರ ಕಂಡು ಬರುವ ಸಾಹಿತ್ಯಗಳನ್ನು ಆರಿಸಿಕೊಂಡು ಮಕ್ಕಳಿಂದ ಸವಾಲು-ಜವಾಬು ಚಟುವಟಿಕೆ ಕೈಗೊಳ್ಳಿ. **ಉದಾ:** ಭಾಗ್ಯದ ಬಳೆಗಾರ, ಒಗಟುಗಳಿಂದ ಕೂಡಿರುವ ಜಾನಪದ ಹಾಡುಗಳು.<br>14.2 - ನಾಲಿಗೆ ಸುರುಳಿಯಂತಹ ವಾಕ್ಯಗಳನ್ನು ಬರೆಸಿ, ಓದಿಸಿ ಹಾಗೂ ಸ್ವತಃ ಮಕ್ಕಳೇ ಹೊಸ ವಾಕ್ಯಗಳನ್ನು ರಚಿಸಲು ಪ್ರೋತ್ಸಾಹಿಸಿ.<br>**ಉದಾ :** "ಅಶ್ವಥ್ಅರಳಿಮರದಬುಡ ತಳಿರೊಡೆದೆರೆಡೆಲೆಯಾಯಿತು" |
| **15.** | 6. ಮುದ್ರಿತ ಪಠ್ಯೇತರ ವಿಷಯ ಮತ್ತು ಕೈ-ಬರಹಗಳನ್ನು ಓದಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವರು. | * ಪಠ್ಯೇತರ ವಿಷಯಗಳನ್ನು ಓದಲು ಆಸಕ್ತಿ ಬೆಳೆಸಿಕೊಳ್ಳುತ್ತಾರೆ. | **15.1 - 'ಚಿಂತನ-ಮಂಥನ'**<br>15.2 – ಭಿತ್ತಿಪತ್ರಗಳ ಓದು.<br>15.3 – ಸೂಚನಾ ಫಲಕಗಳ ಓದು.<br>15.4 – ಜಾಹೀರಾತು ಫಲಕಗಳ ಓದು. | 15.1 - ಶಿಕ್ಷಕರು ಮಕ್ಕಳಿಗೆ ತಮ್ಮ ಮನೆಗಳಲ್ಲಿ ಇರುವ ವಿಭಿನ್ನ ರೀತಿಯ ಮುದ್ರಿತ ಪತ್ರಿಕೆಗಳನ್ನು ಸಂಗ್ರಹಿಸಿ ತರಲು ಹೇಳಿ ತರಗತಿಯಲ್ಲಿ ಗಟ್ಟಿಯಾಗಿ ಓದಲು ಹೇಳಿ.<br>**ಉದಾ:** ಲಗ್ನಪತ್ರಿಕೆಗಳು, ಭಿತ್ತಿಪತ್ರಿಕೆಗಳು, ಕರಪತ್ರಗಳು. |

| | | | | |
|---|---|---|---|---|
| **16.** | | * ಇತರರ ಕೈಬರಹಗಳನ್ನು ಓದಿ ಅರ್ಥೈಸಿಕೊಳ್ಳಲು ಸಮರ್ಥರಾಗುತ್ತಾರೆ. | **16.1 - 'ಯೋಚಿಸು-ಜೋಡಿಸು'**<br>16.2 – ಕವಿಗಳ ಕೈಬರಹದ ಓದು.<br>16.3 – ಸಹಪಾಠಿಗಳ ಕೈಬರಹದ ಓದು.<br>16.4 – ಗೋಡೆ ಬರಹಗಳ ಓದು. | 16.1 - ಶಿಕ್ಷಕರು ಮಕ್ಕಳಿಗೆ ನಿಮ್ಮ ಹೆಸರನ್ನು ಬರೆದು ಅದರ ಜೊತೆಗೆ ನಿಮ್ಮ ಹೆಸರಿನ ಮೊದಲ ಅಕ್ಷರವನ್ನು ಹೊಂದುವ ಮತ್ತೊಂದು ಪದವನ್ನು ಜೋಡಿಸಿ ವಾಕ್ಯ ರಚಿಸುವಂತೆ ಹೇಳಿ, ನಂತರ ಸ್ನೇಹಿತರೊಂದಿಗೆ ಅದಲು ಬದಲು ಮಾಡಿಕೊಂಡು ಓದಲು ಹೇಳಿ.<br>**ಉದಾ:** ನಾನು **ಕಿರಣ್** ನನಗೆ **ಕಲ್ಲಂಗಡಿ** ಹಣ್ಣು ಎಂದರೆ ಇಷ್ಟ.<br>* ನಾನು **ಮನೋಹರ** ನನಗೆ ನನ್ನ **ಮಾವ** ಎಂದರೆ ಬಹಳ ಪ್ರೀತಿ. |
| **17.** | | * ವೃತ್ತಪತ್ರಿಕೆಗಳ ಓದುವ ಹವ್ಯಾಸ ಬೆಳೆಸಿಕೊಳ್ಳುತ್ತಾರೆ. | **17.1 - 'ವಾರ್ತಾ ವಾಚನ'**<br>17.2 – ವೃತ್ತ ಪತ್ರಿಕೆಗಳ ಮುಖ್ಯಾಂಶ ಬರಹ.<br>17.3 – ಪತ್ರಿಕೆಗಳ ಚಿತ್ರ ಸಹಿತ ಸುದ್ದಿ ಸಂಗ್ರಹ.<br>17.4 – ಪ್ರಕಟಣೆಗಳ ವಾಚನ | 17.1 - ಶಿಕ್ಷಕರು ಮಕ್ಕಳಿಗೆ ವಾರ್ತಾ ವಾಹಿನಿಯನ್ನು ನೋಡಿ ಅಥವಾ ವಾರ್ತಾಪತ್ರಿಕೆಯನ್ನು ಓದಿ ಅಲ್ಲಿನ ಪ್ರಮುಖ ಐದು ವಿಷಯಗಳನ್ನು ಚಿತ್ರದ ಸಮೇತ ವಿವರಗಳನ್ನು ಬರೆದುಕೊಂಡು ಬಂದು ತರಗತಿಯಲ್ಲಿ ಪ್ರಸ್ತುತಪಡಿಸಲು ಹೇಳಿ. |
| **18.** | **ಕ್ಷೇತ್ರ : ಬರೆಯುವುದು**<br>7. ಸರಳ ಕ್ರಿಯಾತ್ಮಕ ಸಾಂದರ್ಭಿಕ ಭಾಷಾಂಶದ ನಿಯಮಗಳನ್ನು ಅರ್ಥಮಾಡಿಕೊಂಡು ಬರವಣಿಗೆಯಲ್ಲಿ ಬಳಸುವರು. | * ಸೂಚಿತ ಕಾರ್ಯವನ್ನು ಗಮನಿಸಿ ತನ್ನ ಸ್ವಂತ ಮಾತುಗಳಲ್ಲಿ ಕರ್ತೃ, ಕರ್ಮ, ಕ್ರಿಯಾ ಪದಗಳನ್ನು ಒಳಗೊಂಡಂತೆ ಬರೆಯುತ್ತಾರೆ. | **18.1 - 'ನನಗೆ-ನೀನ್ಯಾರು?'**<br>18.2 – ಕ್ರಿಯಾ ಪದಗಳನ್ನು ಗುರುತಿಸುವುದು.<br>18.3 – ಕ್ರಿಯಾ ಪದಗಳಿಗೆ ಸ್ವಂತವಾಕ್ಯ ರಚನೆ. | 18.1 -ಶಿಕ್ಷಕರು ಹಲವಾರು ಚೀಟಿಗಳಲ್ಲಿ ಪದಗಳನ್ನು ಬರೆದು, ಮಕ್ಕಳಿಂದ ಒಂದನ್ನು ಆರಿಸಿ ಆ ಪದವೇ ಉತ್ತರವೆಂದು ಎಂದು ತಿಳಿದು ಆ ಉತ್ತರ ಬರುವಂತೆ ಕನಿಷ್ಠ ಐದು ಪ್ರಶ್ನೆಗಳನ್ನು ಬರೆದು ಓದಲು ತಿಳಿಸಿ.<br>**ಉದಾ :** ಮಾವಿನಹಣ್ಣು<br>-ನಮ್ಮ ರಾಷ್ಟ್ರೀಯ ಹಣ್ಣು ಯಾವುದು?<br>-ಹುಟ್ಟಿದಾಗ ಹಸಿರು, ಸಾಯುವಾಗ ಹಳದಿ ನಾನ್ಯಾರು? |

| | | | | |
|---|---|---|---|---|
| | | | 18.4 – ವಾಕ್ಯದಲ್ಲಿ ಕ್ರಿಯೆಯನ್ನು ಗುರುತಿಸಿ ಕರ್ತೃ ಹುಡುಕಿ. | |
| **19.** | | * ಕೊಟ್ಟ ಸನ್ನಿವೇಶವನ್ನು ಗಮನಿಸಿ ತನ್ನ ಮಾತುಗಳಲ್ಲಿ ಅರ್ಥಪೂರ್ಣ ವಾಕ್ಯಗಳನ್ನು ಒಳಗೊಂಡಂತೆ ಟಿಪ್ಪಣಿ ಬರೆಯುತ್ತಾರೆ. | **19.1 - 'ಚಿತ್ರಕತೆ'**<br>19.2 – ಪ್ರವಾಸದ ಅನುಭವಗಳನ್ನು ಬರೆಸುವುದು.<br>19.3 – ವಿವಿಧ ವಿಷಯಗಳ ಟಿಪ್ಪಣಿ ಬರಹ. | 19.1 - ಶಿಕ್ಷಕರು ಮಕ್ಕಳಿಗೆ ಒಂದು ಸನ್ನಿವೇಶದ ಚಿತ್ರವನ್ನು ನೀಡಿ ಅದರ ಬಗ್ಗೆ ಟಿಪ್ಪಣಿ ಬರೆಯಲು ತಿಳಿಸಿ. |
| **20.** | | * ಓದಿದ ವಿಷಯಗಳಲ್ಲಿನ ಭಾಷಾಂಶಗಳನ್ನು ಗ್ರಹಿಸಿ ಬರೆಯುತ್ತಾರೆ. | **20.1 - 'ಸಂಗ್ರಹ ಬರಹ'**<br>20.2 – ಪದಗಳಲ್ಲಿ ವಿಭಕ್ತಿ ಪ್ರತ್ಯಯಗಳ ಪ್ರಯೋಗ.<br>20.3 – ಸಂಧಿ ಪದಗಳನ್ನು ಬಿಡಿಸಿ ಬರೆ.<br>20.4 – ಕಾಲಗಳ ಪ್ರಯೋಗಗಳ ವಾಕ್ಯ ಸಂಗ್ರಹ. | 20.1 - ಶಿಕ್ಷಕರು ವಾರ್ತಾಪತ್ರಿಕೆಯಲ್ಲಿ ಬರುವ ಅಂಕಣ ಬರಹಗಳನ್ನು ಸ್ವತಃ ಅಥವಾ ಮಕ್ಕಳಿಂದಲೇ ಸಂಗ್ರಹಿಸಿಕೊಂಡು ಅದರಲ್ಲಿ ಬಳಕೆಯಾಗಿರುವ ವಿವಿಧ ರೀತಿಯ ವ್ಯಾಕರಣಾಂಶಗಳನ್ನು ಪಟ್ಟಿ ಮಾಡಿಸಿ, ತರಗತಿಯಲ್ಲಿ ಪ್ರಸ್ತುತ ಪಡಿಸಲು ತಿಳಿಸಿ. |
| **21.** | 8. ವಿವಿಧ ನಮೂನೆಯ ಉಭಯ ಕುಶಲೋಪರಿ ಪತ್ರ, ಪ್ರವಾಸ ಲೇಖನಗಳನ್ನು ಸೂಕ್ತ ಲೇಖನ ಚಿನ್ಹೆಗಳನ್ನು ಬಳಸಿ ಬರೆಯುವರು. | * ಪತ್ರದ ಮಾದರಿಗಳನ್ನು ತಿಳಿದು ಅದರ ವಿನ್ಯಾಸಕ್ಕೆ ಅನುಗುಣವಾಗಿ ಬರೆಯುತ್ತಾರೆ. | **21.1 - 'ಹಳೇಬೇರು-ಹೊಸ ಚಿಗುರು'**<br>21.2 – ಪತ್ರ ಸಂಬೋಧನೆಗಳ ಪರಿಚಯ.<br>21.3 – ವಿವಿಧ ಪತ್ರಗಳ ಬರಹ.<br>21.4 – ಲೇಖನ ಚಿನ್ಹೆಗಳ ಪರಿಚಯ. | 21.1 - ಶಿಕ್ಷಕರು ಹಿಂದಿನ ಹಾಗೂ ಇಂದಿನ ಸಮೂಹ ಮಾಧ್ಯಮಗಳನ್ನು ಕುರಿತು ಮಕ್ಕಳೊಂದಿಗೆ ಚರ್ಚಿಸಿ, ನಂತರ ಪತ್ರ ಬರಹದ ವಿವಿಧ ಮಾದರಿಗಳನ್ನು ಕುರಿತು ಪರಿಚಯಿಸಿ. |

| | | | | |
|---|---|---|---|---|
| **22.** | | * ಸಂಬಂಧಗಳನ್ನು ಅಥವಾ ವ್ಯವಹಾರಗಳನ್ನು ಆಧರಿಸಿ ಸೂಕ್ತ ಮಾದರಿಯಲ್ಲಿ ಪತ್ರ ಬರೆಯುತ್ತಾರೆ. | **22.1 - 'ಓಲೆ-ಕರೆಯೋಲೆ'**<br>22.2 - ಪೊಲೀಸ್ ಠಾಣೆಗೆ ದೂರು.<br>22.3 - ಸಮಾರಂಭಕ್ಕೆ ಆಹ್ವಾನ ಪತ್ರ.<br>22.4 – ಮಹಾತ್ಮರ ಪತ್ರಗಳ ವಾಚನ. | 22.1 - ಶಿಕ್ಷಕರು ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿ, ಪ್ರತೀ ಗುಂಪಿಗೂ ಒಂದು ಪ್ರತ್ಯೇಕ ವಿಷಯಗಳನ್ನು ನೀಡಿ, ಪತ್ರವನ್ನು ಬರೆದು ನಂತರ ತರಗತಿಯಲ್ಲಿ ಗಟ್ಟಿಯಾಗಿ ಓದಲು ತಿಳಿಸಿ. |
| **23.** | | | **23.1 - 'ಭಿತ್ತಿಪತ್ರ ತಯಾರಿ'**<br>23.2 – ಇ-ಮೇಲ್ ಪತ್ರದ ತಯಾರಿ.<br>23.3 – ಇಮೇಲ್ ವಿಳಾಸವನ್ನು ಸೃಜಿಸುವುದು. | 23.1 - ಶಿಕ್ಷಕರು ಮಕ್ಕಳಿಂದ ವಿವಿಧ ರೀತಿಯ ಪತ್ರಗಳನ್ನು ಸಂಗ್ರಹಿಸಲು ತಿಳಿಸಿ, ಆದನ್ನು ಚಾರ್ಟ್ ನಲ್ಲಿ ಅಂಟಿಸಿ ಪ್ರದರ್ಶಿಸಲು ಅವಕಾಶ ಕಲ್ಪಿಸಿ.<br>**ಉದಾ:** ಅಂಚೆ ಕಛೇರಿಯಲ್ಲಿ ದೊರೆಯುವ ಪತ್ರಗಳು. |
| **24.** | | * ಪ್ರವಾಸದ ಅನುಭಗಳನ್ನು ಕುರಿತು ಸೂಕ್ತ ಲೇಖನ ಚಿನ್ಹೆಗಳನ್ನು ಬಳಸಿ ಟಿಪ್ಪಣಿ ಬರೆದು ಶೀರ್ಷಿಕೆಯನ್ನು ನೀಡುತ್ತಾರೆ. | **24.1 - 'ಪತ್ರದಲ್ಲಿ ಪಯಣ'**<br>24.2 – ಹಿಂದಿನ – ಇಂದಿನ ಸಮೂಹ ಮಾಧ್ಯಮಗಳ ಕುರಿತು ಟಿಪ್ಪಣಿ ಬರಹ.<br>24.3 – ಲೇಖನ ಚಿನ್ಹೆಗೊಂದು ವಾಕ್ಯ ರಚನೆ. | 24.1 - ಶಿಕ್ಷಕರು Inland Letter ನಲ್ಲಿ ಮಕ್ಕಳಿಗೆ ತಮ್ಮ ಪ್ರವಾಸದಲ್ಲಿ ಆದ ಅನುಭವಗಳನ್ನು ವಿವರವಾಗಿ ಬರೆದು ಸ್ಪಷ್ಟವಾಗಿ ಹಾಗೂ ಸರಿಯಾದ 'ಗೆ' ವಿಳಾಸವನ್ನು ನಮೂದಿಸಿ ಅಂಚೆ ಕಛೇರಿಯಲ್ಲಿ ಪೋಸ್ಟ್ ಮಾಡಿಸುವುದು. ಕೆಲ ದಿನಗಳ ನಂತರ ಪತ್ರ ತಲುಪಿದೆಯೇ? ಎಂಬುದನ್ನು ಖಚಿತ ಪಡಿಸಿಕೊಳ್ಳಲು ತಿಳಿಸಿ. |
| **25.** | 9. ಕತೆಗಳನ್ನು ನಾಟಕಗಳಾಗಿ, ನಾಟಕಗಳನ್ನು ಕತೆಗಳಾಗಿ ಪರಿವರ್ತಿಸುವ ಹಾಗೂ | * ಕತೆ ಮತ್ತು ನಾಟಕಗಳ ಲಕ್ಷಣಗಳನ್ನು ತಿಳಿಯುತ್ತಾರೆ. | **25.1 - 'ರಸ ಪ್ರಶ್ನೆ'**<br>25.2 – ಕತೆಗಳ ವಾಚನ.<br>25.3 – ನಾಟಕ ಓದುವ ಶೈಲಿಯ ಅಭ್ಯಾಸ. | 25.1 - ಶಿಕ್ಷಕರು ಮಕ್ಕಳನ್ನು ಎರಡು ಗುಂಪುಗಳಾಗಿ ವಿಂಗಡಿಸಿ ಕತೆ ಹಾಗೂ ನಾಟಕ ಸಾಹಿತ್ಯದ ಪುಸ್ತಕಗಳನ್ನು ನೀಡಿ ವ್ಯತ್ಯಾಸಗಳನ್ನು ಪಟ್ಟಿ ಮಾಡಿಸಿ ತರಗತಿಯಲ್ಲಿ ಪ್ರಸ್ತುತ ಪಡಿಸಲು ತಿಳಿಸಿ. |

| | | | | |
|---|---|---|---|---|
| | ಕವಿತೆಗಳಿಗೆ ಸಾರಾಂಶ ಬರೆಯುವ ಸೃಜನಶೀಲತೆ ಬೆಳೆಸಿಕೊಳ್ಳುವರು. | | 25.4 – ನಾಟಕದ ನಿರೂಪಣೆ | |
| **26.** | | * ಸಾಹಿತ್ಯವನ್ನು ಇನ್ನೊಂದು ಪ್ರಕಾರಕ್ಕೆ ರೂಪಾಂತರಿಸಲು ಸಮರ್ಥರಾಗುತ್ತಾರೆ. | **26.1 – 'ರೂಪ-ಪ್ರತಿರೂಪ'**<br>26.2 – ನಾಟಕಗಳ ಸಾರಾಂಶ ಬರೆಸುವುದು.<br>26.3 – ಆಯ್ದ ನಾಟಕದ ಅಭಿನಯ.<br>26.4 – ಕತೆಗಳಲ್ಲಿನ ಪಾತ್ರಗಳ ವಿಶೇಷತೆ ಹೇಳುವುದು. | 26.1 - ಶಿಕ್ಷಕರು ಈಗಾಗಲೇ ಮಕ್ಕಳಿಗೆ ನೀಡಿರುವ ಸಾಹಿತ್ಯವನ್ನು ನಾಟಕದಿಂದ ಕತೆಗೆ, ಕತೆಯಿಂದ ನಾಟಕ ರೂಪಕ್ಕೆ ಪರಿವರ್ತಿಸಲು ಪ್ರೋತ್ಸಾಹಿಸಿ. |
| **27.** | | * ಕವಿತೆಗಳಿಗೆ ಸಾರಾಂಶವನ್ನು ಬರೆಯುತ್ತಾರೆ. | 27.1 - **'ಸಹೃದಯ'**<br>27.2 – ಕವಿಗಳ ಪದ್ಯಗಳ ಸಂಗ್ರಹ ಬರಹ.<br>27.3 – ಪ್ರಾಸಪದಗಳನ್ನು ಗುರುತಿಸಿ ಹೇಳುವುದು.<br>27.4 – ಸ್ವರಚಿತ ಕವನಗಳ ರಚನೆ.<br>27.5 - **'ಕಾವ್ಯೇಷು ನಾಟಕಂ ರಮ್ಯಂ'** | 27.1 - ಶಿಕ್ಷಕರು ಮಕ್ಕಳಿಗೆ ತಾವೇ ಸ್ವತಃ ಕವಿತೆಯನ್ನು ರಚಿಸಿ ಅಥವಾ ಸಂಗ್ರಹಿಸಿ ತಂದ ಕವಿತೆಗಳ ಸಾರಾಂಶವನ್ನು ಬರೆದು ಪ್ರಸ್ತುತಪಡಿಸಲು ತಿಳಿಸಿ.<br>- ಕವಿಯ / ಲೇಖಕರ ಯೋಚನಾ ಲಹರಿ ಹಾಗೂ ಅರ್ಥಕ್ಕೆ ಧಕ್ಕೆಯಾಗದಂತೆ ಸಹೃದಯನಂತೆ ಆನಂದಿಸುವರು.<br>27.5 - ಶಿಕ್ಷಕರು ಸಣ್ಣ ಘಟನೆಗಳನ್ನು ಕುರಿತ ಹಳಗನ್ನಡ ಸಾಹಿತ್ಯದ ಪದ್ಯಗಳನ್ನು ನೀಡಿ ಮಕ್ಕಳಿಂದ ಅದನ್ನು ನಾಟಕಗಳಾಗಿ ಪರಿವರ್ತಿಸಿ ಅಭಿನಯಿಸಲು ಅವಕಾಶ ಕಲ್ಪಿಸಿ.<br>- ಅಭಿಮನ್ಯು ಪರಾಕ್ರಮ.<br>- ಹರಿಶ್ಚಂದ್ರ ಕಾವ್ಯ<br>- ರಾಮಧಾನ್ಯ ಚರಿತೆ ಇತ್ಯಾದಿ |

| | | | | |
|---|---|---|---|---|
| **28.** | 10. ಛಂದಶ್ಶಾಸ್ತ್ರದ ಪಾದ, ಪ್ರಾಸ, ಯತಿ, ಮಾತ್ರೆ, ಗಣ ಇವುಗಳ ಪರಿಚಯ ಮಾಡಿಕೊಳ್ಳುವರು. | * ಲಘು ಹಾಗೂ ಗುರು ಬರುವ ಅಕ್ಷರ/ ಸಂದರ್ಭಗಳನ್ನು ತಿಳಿಯುತ್ತಾರೆ. | **28.1 - 'ಪುನರ್ಮನನ'**<br>28.2 – ಹಳಗನ್ನಡ ಪದ್ಯಗಳ ಸಂಗ್ರಹ ಬರಹ.<br>28.3 – ಹಳಗನ್ನಡ ಪದ್ಯಗಳಲ್ಲಿನ ಪದ ವಿಗಂಡಣೆ.<br>28.4 – ಲಘು ಗುರು ಬಳಸಿ ರಂಗೋಲಿ ಬರಹ. | 28.1 - ಶಿಕ್ಷಕರು ಲಘು ಹಾಗೂ ಗುರು ಚಿನ್ಹೆಗಳನ್ನು ಪರಿಚಯಿಸಿ, ನಂತರ ಲಘು ಬರುವ ಅಕ್ಷರಗಳನ್ನು ತಿಳಿಸಿ, ಲಘು ಬರುವ ಪದಗಳನ್ನೇ ಬರೆಸಿ ಅಭ್ಯಾಸ ಮಾಡಿಸಿ.<br>* ನಂತರ ಯಾವ ಯಾವ ಸಂದರ್ಭಗಳಲ್ಲಿ ಗುರು ಬರುತ್ತದೆ ಎಂಬುದನ್ನು ತಿಳಿಸಿ, ಪದಗಳನ್ನು ನೀಡಿ ಪ್ರಸ್ತಾರ ಹಾಕಿಸಿ.<br>- ಲಘು ಹಾಗೂ ಗುರು ಚಿನ್ಹೆಗಳ ಮಾದರಿಗಳನ್ನು ತಯಾರಿಸಿ. |
| **29.** | | * ಪಾದ, ಪ್ರಾಸ, ಮಾತ್ರೆ, ಗಣ ಇವುಗಳ ಸಾಮಾನ್ಯ ಲಕ್ಷಣಗಳನ್ನು ಅರಿಯುತ್ತಾರೆ. | **29.1 - 'ನನ್ನ ಲೆಕ್ಕವೂ ಪಕ್ಕ'**<br>29.2 – ಆದಿಪ್ರಾಸದ ಪ್ರಯೋಗ ವಿವರಣೆ.<br>29.3 – ಕಂದಪದ್ಯದ ಪರಿಚಯ.<br>29.4 – ವಚನಗಳಲ್ಲಿ ಛಂಧಸ್ಸು? ಇದೆಯೇ.? | 29.1-ಶಿಕ್ಷಕರು ಮಿಂಚು ಪಟ್ಟಿಗಳ ಮೂಲಕ ಲಘು, ಗುರುಗಳ ಪರಿಚಯ ಮಾಡಿಸಿ ನಂತರ ಲಘು, ಗುರುಗಳು ಬರುವ ಅಕ್ಷರಗಳನ್ನು ಪಟ್ಟಿಮಾಡಿಸಿ ಅಭ್ಯಾಸ ಮಾಡಿಸಿ. ನಂತರ ತಮ್ಮ ಹಾಗೂ ತಮ್ಮ ಮನೆಯವರ ಹೆಸರುಗಳಿಗೆ ಪ್ರಸ್ತಾರ ಹಾಕಿಸಿ ಗುಣಿಸಿ ಒಟ್ಟು ಮೊತ್ತವನ್ನು ಹೇಳಿಸಿ.<br>- ಸ್ನೇಹಿತರ ಹೆಸರುಗಳಿಗೆ ಪ್ರಸ್ತಾರ ಹಾಕಿಸಿ.<br>- ಛಂದೋಬದ್ಧವಾದ ಕವಿವಾಣಿಗಳಿಗೆ ಪ್ರಸ್ತಾರ ಹಾಕಿಸಿ. |
| **30.** | | * ಪದ್ಯಗಳಿಗೆ ಪ್ರಸ್ತಾರ ಹಾಕುತ್ತಾರೆ.<br><br>* ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಪದ್ಯ ಜಾತಿ ಹೆಸರಿಸುವರು. | **30.1 - ಛಂದೋಬಂಧ**<br>30.2 – ಹಳಗನ್ನಡ ಪದ್ಯವನ್ನು, ಹೊಸಗನ್ನಡಕ್ಕೆ ಬದಲಾವಣೆ.<br>30.3 – ಹಳಗನ್ನಡ ಪದ್ಯಗಳ ಗಮಕ ವಾಚನ.<br>**30.4 - 'ಸಿಂಹಾವಲೋಕನ ಕ್ರಮದಿಂ'** | 30.1-ಶಿಕ್ಷಕರು ಈಗಾಗಲೇ ಮಕ್ಕಳಿಗೆ ನೀಡಿರುವ ಹಳಗನ್ನಡದ ಪದ್ಯ ಭಾಗಗಳಿಗೆ ಪ್ರಸ್ತಾರ ಹಾಕಿಸಿ, ಅದರಲ್ಲಿ ಅವರು ಕಂಡ ವಿಶಿಷ್ಟ ಲಕ್ಷಣಗಳನ್ನು ಪಟ್ಟಿಮಾಡಿಸಿ ಬರೆಸಿ.<br>-ಹಿಂದಿನ ತರಗತಿಗಳ ಪದ್ಯಗಳನ್ನು ಬಳಸಿಕೊಳ್ಳಿರಿ.<br>30.4-ಶಿಕ್ಷಕರು ಮಕ್ಕಳಿಗೆ ಪ್ರಸ್ತಾರ ಹಾಕಿಸಿದ, ನಂತರ ಸೂಕ್ತ ರೀತಿಯಲ್ಲಿ ಗಣ ವಿಭಾಗ ಮಾಡಿಸಿ ಪದ್ಯ ಪ್ರಕಾರ ತಿಳಿಸಲು ಹೇಳಿ.<br>- ಹಿಂದಿನ ತರಗತಿಯಲ್ಲಿ ಕಲಿತ ಪದ್ಯ ಪ್ರಕಾರವನ್ನು ಆಧರಿಸಿ ಕೈಗೊಳ್ಳಿರಿ. |